# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪ ವಲಯ,**
**ಮಹದೇವಪುರ ವಲಯ ಬೆಂಗಳೂರು-43.**

ಸಂಖ್ಯೆ.ಬಿಬಿಎಂಪಿ/ಸಕಂಅಹೊಉವ/(ಸಿಬ್ಬಂದಿ)ಪಿಆರ್/ /2022-23 ದಿನಾಂಕ:- 21.01.2023

***ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-21.01.2023 ರಂದು ಹೊರಮಾವು ಉಪ-ವಿಭಾಗದ ಕಛೇರಿಯಲ್ಲಿ ಹೊರಮಾವು ವಾರ್ಡ್-81 ಮತ್ತು ಬಾಬುಸಾಪಾಳ್ಯ ವಾರ್ಡ್-82 ರ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.***

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊ.ಸಂ |
|---|---|---|---|
| 1 | ಶ್ರೀ.ವಿನಯ್.ಕೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ | 99739207348 |
| 2 | ಶ್ರೀ.ಎಸ್.ಹೆಚ್.ಕೇಶವ | ನೋಡಲ್ ಅಧಿಕಾರಿ ವಾರ್ಡ್ ನಂ-81 | 9448731722 |
| 3 | ಶ್ರೀ.ಸಂಜಯ್‌ಕುಮಾರ್ | ಹಿರಿಯ ಆರೋಗ್ಯ ನಿರೀಕ್ಷಕರು | |
| 4 | ಶ್ರೀ. ರಮೇಶ್ | ಸಹಾಯಕ ಅಭಿಯಂತರರು ವಾರ್ಡ್ ಸಂಚಾಲಕರು | 9480688025 |
| | | ಸಾರ್ವಜನಿಕರು | |
| 1 | ಶ್ರೀ.ಕೋಚು ಶಂಕರ್, | ಟ್ರಿನಿಟಿ ಬಡಾವಣೆ, | |
| 2 | ಶ್ರೀ.ನಂದೀಶ್. | ಕೆ.ಎಸ್.ಎಂ ಎನ್‌ಕ್ಲೇವ್ | |
| 3 | ಶ್ರೀ.ಮಹೇಶ್ | ಬಾಬುಸಾಪಾಳ್ಯ | |
| 4 | ಶ್ರೀ.ದೊಂಡಿಬಾ | ಗೋಲ್ಡನ್ ಎನ್‌ಕ್ಲೇವ್ | |
| 5 | ಶ್ರೀ.ಶ್ರೀಕಾಂತ್, | ಮಲ್ಲಪ್ಪ ಬಡಾವಣೆ, | |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.81 ಮತ್ತು 82 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ಪು.ತಿ.ನೋ

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಶ್ರೀ.ಕೋಚು ಶಂಕರ್, ಟ್ರಿನಿಟಿ ಬಡಾವಣೆ, ವಾರ್ಡ್ ನಂ.81 :-** ರವರು ಮಾತನಾಡುತ್ತಾ, ಹೊರಮಾವು ಗ್ರಾಮದ ಟ್ರಿನಿಟಿ ಬಡಾವಣೆಯಲ್ಲಿ 6ನೇ ಮತ್ತು 5ನೇ ಕ್ರಾಸ್‌ನಲ್ಲಿ ಹಾಳಾಗಿರುವ ರಸ್ತೆಯನ್ನು ಪಾಟ್ ಹೋಲ್ ಮಾಡುವ ಬಗ್ಗೆ, ಮತ್ತು 6ನೇ ಅಡ್ಡರಸ್ತೆ ಕೊನೆಯಲ್ಲಿ ರಾಜಕಾಲುವೆ ಹಾದುಹೋಗುತ್ತಿದ್ದು, ರಸ್ತೆಯ ಬದಿಯ ಆರ್.ಸಿ.ಸಿ ಚರಂಡಿಯನ್ನು ರಾಜಕಾಲುವೆಗೆ ಸಂಪರ್ಕ ಕಲ್ಪಿಸಲು ಕೋರಿದ್ದು, ಹೊಸದಾಇ 1 ಕೊಳವೆಬಾವಿ ಕೊರೆದು ಮೋಟರ್‌ಪಂಪ್ ಅಳವಡಿಸಿಕೊಡಲು ಕೋರಿರುತ್ತಾರೆ. ಮತ್ತು 6 ಅಡ್ಡರಸ್ತೆಗಳಲ್ಲಿ ಅಡ್ಡರಸ್ತೆಯ ನಾಮಪಲಕಗಳನ್ನು, ಮುಖ್ಯರಸ್ತೆಗೆ 1 ದೊಡ್ಡ ನಾಮಫಲಕವನ್ನು ನೀಡಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.81 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ನಂದೀಶ್.ಕೆ.ಎಸ್.ಎಂ ಎನ್‌ಕ್ಲೇವ್ ವಾರ್ಡ್ ನಂ.81:-** ರವರು ಮಾತನಾಡುತ್ತಾ, ಕೆ.ಎಸ್.ಎಂ ಬಡಾವಣೆಯಲ್ಲಿ 3 ಅಡ್ಡರಸ್ತೆಗಳಲ್ಲಿ ರಸ್ತೆ ಬದಿಯ ಚರಂಡಿ ಮತ್ತು ರಸ್ತೆಗಳನ್ನು ನಿರ್ಮಿಸಿಕೊಡಲು, ಮತ್ತು ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಿಕೊಡಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.81 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ದೊಂಡಿಬಾ ಗೊಲ್ಡನ್ ಎನ್‌ಕ್ಲೇವ್ ವಾರ್ಡ್ ನಂ.81 :-** ರವರು ಮಾತನಾಡಿ, ಗೋಲ್ಡನ್ ಎನ್‌ಕ್ಲೇವ್ ಮುಖ್ಯರಸ್ತೆಯ ಕೊನೆಯಲ್ಲಿ ಚರಂಡಿಗೆ ಕವರಿಂಗ್ ಸ್ಲ್ಯಾಬ್ ಹಾಸುವುದು ಮತ್ತು ಅಲ್ಲಲ್ಲಿ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿದ್ದು ಇವುಗಳನ್ನು ಮುಚ್ಚಿಕೊಡಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ನಂ.81 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ಶ್ರೀಕಾಂತ್, ಮಲ್ಲಪ್ಪ ಬಡಾವಣೆ ವಾರ್ಡ್ ನಂ.82:-** ರವರು ಮಾತನಾಡುತ್ತಾ, ರಸ್ತೆ ಬದಿಯಲ್ಲಿರುವ ಅನುಪಯುಕ್ತ ಮಣ್ಣನ್ನು ತೆರವುಗೊಳಿಸಬೇಕೆಂದು ಮತ್ತು ರಸ್ತೆಗಳಿಗೆ ನಾಮಫಲಕಗಳನ್ನು ಅಳವಡಿಸಲು ಕೋರಿ.

ಕ್ರಮ:- ಸಹಾಯಕ ಅಭಿಯಂತರರು, ಹೊರಮಾವು ವಾರ್ಡ್ ನಂ.81 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

(ಎಸ್.ಹೆಚ್ ಕೇಶವ)
**ನೋಡೆಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ-81**
ಹಾಗೂ ತೋಟಗಾರಿಕಾ ನಿರೀಕ್ಷಕರು
(ಮಹದೇವಪುರ ವಲಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ.ರಮೇಶ್
**ಸಹಾಯಕ ಅಭಿಯಂತರರು ಹೊರಮಾವು ವಾರ್ಡ್**
**ಸಂಖ್ಯೆ-81**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1.ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಲಾಗಿದೆ.

2.ಕಛೇರಿ ಪ್ರತಿ.